# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 463 |
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 19-07-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬಿತ್ತನೆ ಬೀಜಗಳ ದರ ಗಣನೀಯವಾಗಿ ಏರಿಕೆ ಆಗಿರುವುದರಿಂದ ರೈತಾಪಿ ವರ್ಗ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. ರಾಜ್ಯದಲ್ಲಿ ಕೆಲವು ಬೆಳೆಗಳ ಬಿತ್ತನೆ ಬೀಜಗಳ ದರ ಏರಿಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>2023ರ ಮುಂಗಾರು ಹಂಗಾಮಿಗೆ ಹೋಲಿಸಿದಲ್ಲಿ ಹೆಸರು, ಉದ್ದು, ತೊಗರಿ ಮತ್ತು ಜೋಳದ ಬೆಳೆಗಳ ಬಿತ್ತನೆ ಬೀಜಗಳ ದರಗಳು ಹೆಚ್ಚಾಗಿರುತ್ತದೆ. ಸೋಯಾಅವರೆ ಬಿತ್ತನೆ ಬೀಜ ದರಗಳು ಶೇ.8ರಷ್ಟು ಕಡಿತಗೊಂಡಿರುತ್ತದೆ ಹಾಗೂ ಸೂರ್ಯಕಾಂತಿ ಬಿತ್ತನೆ ಬೀಜ ದರಗಳು ಕಳೆದ ಸಾಲಿನಷ್ಟೆ ಇದ್ದು, ಯಾವುದೇ ಬದಲಾವಣೆ ಇರುವುದಿಲ್ಲ. ದಿನಾಂಕ:15.07.2024ರವರೆಗೆ ಸುಮಾರು 3.26ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ 7.76 ಲಕ್ಷ ರೈತರಿಗೆ ವಿತರಿಸಲಾಗಿರುತ್ತದೆ. ಕಳೆದ ಸಾಲಿನಲ್ಲಿ ಇದೇ ಸಮಯಕ್ಕೆ 2.46 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳು ವಿತರಣೆಯಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಬಿತ್ತನೆ ಬೀಜಗಳ ಗಣನೀಯವಾಗಿ ಏರಿಕೆ ಆಗಿರುವುದಕ್ಕೆ ಕಾರಣಗಳೇನು; | ಬಿತ್ತನೆ ಬೀಜಗಳ ಖರೀದಿ ದರವನ್ನು ಸರ್ಕಾರಿ ಸ್ವಾಮ್ಯದ ಬೀಜೋತ್ಪಾದನಾ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮ ನಿ., ರಾಷ್ಟ್ರೀಯ ಬೀಜ ನಿಗಮ ನಿ., ಕರ್ನಾಟಕ ಎಣ್ಣೆಬೀಜ ಬೆಳೆಗಾರರ ಮಹಾ ಮಂಡಳಿಗಳು ಹಾಗೂ ಖಾಸಗಿ ಸಂಸ್ಥೆಗಳಿಂದ ಖರೀದಿ ದರ, ಗರಿಷ್ಠ APMC ಮಾರಾಟ ದರಗಳು, ಉತ್ಪಾದನಾ ವೆಚ್ಚ, ಇಳುವರಿ, ಹಾಗೂ ಕಳೆದ ಸಾಲಿನ ಖರೀದಿ ದರ ಮುಂತಾದವುಗಳನ್ನು ಪರಿಗಣಿಸಿ ನಿಗದಿಪಡಿಸಲಾಗುತ್ತದೆ. |

| | | |
|---|---|---|
| | | 2023-24ನೇ ಸಾಲಿನಲ್ಲಿ ಬರಗಾಲದಿಂದ ಬೀಜೋತ್ಪಾದನೆಯು ಗಣನೀಯವಾಗಿ ಕುಂಠಿತವಾಗಿದ್ದು, ಬೀಜೋತ್ಪಾದಕರಿಂದ ಬಿತ್ತನೆ ಬೀಜಗಳನ್ನು ಪಡೆಯಲು ಖರೀದಿ ದರಗಳು ಸಹ ಗಣನೀಯವಾಗಿ ಏರಿಕೆಯಾಗಿರುತ್ತದೆ. |
| ಇ) | ಬಿತ್ತನೆ ಬೀಜಗಳ ಮಾರಾಟ ದರಗಳನ್ನು ನಿಗಧಿಪಡಿಸಲು ಪ್ರಸ್ತುತ ಅನುಸರಿಸುತ್ತಿರುವ ಮಾನದಂಡ ಹಾಗೂ ನಿಯಮಗಳೇನು?(ವಿವರ ನೀಡುವುದು) | ರಾಜ್ಯದ ರೈತರಿಗೆ ರಿಯಾಯಿತಿ ಯೋಜನೆಗಳಡಿ ಬಿತ್ತನೆ ಬೀಜ ಪೂರೈಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ-1999 ರನ್ವಯ Request for proposal ಕರೆದು, ಅವುಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ ಬೀಜ ಸರಬರಾಜುದಾರರನ್ನು ಆಯ್ಕೆ ಮಾಡಲಾಗುತ್ತದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ-1999ರ ಕಂಡಿಕೆ 25 ರನ್ವಯ ಕನಿಷ್ಠ ದರ (ಎಲ್-1) ವನ್ನು ಪರಿಗಣಿಸಲಾಗುತ್ತದೆ. ಇಲಾಖೆಗೆ ಬಿತ್ತನೆ ಬೀಜಗಳ ದರಗಳನ್ನು ಶಿಫಾರಸ್ಸು ಮಾಡಲು ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಅನುವಂಶೀಯ ಮತ್ತು ಸಸ್ಯ ತಳಿ ಶಾಸ್ತ್ರ ವಿಭಾಗ, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ರವರ ಅಧ್ಯಕ್ಯತೆಯಲ್ಲಿ ಏಕಸದಸ್ಯ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ಎಂಪ್ಯಾನೆಲ್ಮೆಂಟಿನಲ್ಲಿ ಆಯ್ಕೆಯಾದ ಸರಬರಾಜುದಾರರೊಂದಿಗೆ ದರ ಸಮಾಲೋಚನೆ ನಡೆಸಿ, ಸರಬರಾಜುದಾರರು Request for proposal ನಲ್ಲಿ ನಮೂದಿಸಿರುವ ದರ, ಹಿಂದಿನ ಸಾಲಿನಲ್ಲಿ ಸದರಿ ತಳಿಯನ್ನೇ ಸರಬರಾಜು ಮಾಡಿದ್ದಲ್ಲಿ ಅದರ ಮಾರಾಟ ದರ, ಹಾಲಿ ಮಾರುಕಟ್ಟೆ ದರ, ಬೀಜೋತ್ಪಾದನೆ ಮಾಡಿದ ರೈತರಿಗೆ ನೀಡುತ್ತಿರುವ ಖರೀದಿ ದರ, ಬೀಜೋತ್ಪಾದನೆಗೆ ತಗುಲುವ ವೈಜ್ಞಾನಿಕ ವೆಚ್ಚ ಮುಂತಾದವುಗಳನ್ನೆಲ್ಲ ಹೋಲಿಕೆ ಮಾಡಿ ಬೆಳೆವಾರು ತಳಿವಾರು ದರಗಳನ್ನು ನಿಗಧಿಪಡಿಸಲಾಗುತ್ತದೆ. |

| | | |
|---|---|---|
| ಈ) | ತೀವ್ರ ಸಂಕಷ್ಟದಲ್ಲಿರುವ ರಾಜ್ಯದ ರೈತರಿಗೆ ನೆರವಾಗುವ ದೃಷ್ಠಿಯಿಂದ ಗಣನೀಯವಾಗಿ ಏರಿಕೆಯಾಗಿರುವ ಬಿತ್ತನೆ ಬೀಜಗಳ ದರವನ್ನು ಕಡಿಮೆ ಮಾಡಲು ಸರ್ಕಾರ ಈ ಕೂಡಲೇ ಕ್ರಮವಹಿಸುವುದೇ? | ಇಲಾಖೆಯು ಬಿತ್ತನೆ ಬೀಜಗಳನ್ನು ಪೂರೈಸುವ ಸಂಸ್ಥೆಗಳನ್ನು ಕೆ.ಟಿ.ಪಿ.ಪಿ 1999 ರ ಕಾಯ್ದೆಯಡಿ Request for proposal ಕರೆದು ಕನಿಷ್ಠ ದರ (ಎಲ್-1) ಸರಬರಾಜುದಾರರನ್ನು ಎಂಪ್ಯಾನೆಲ್ ಮಾಡಲಾಗುತ್ತದೆ. ಕನಿಷ್ಠ(ಎಲ್-1) ದರದ ಆಧಾರದ ಮೇಲೆ ಬಿತ್ತನೆ ಬೀಜಗಳ ದರಗಳನ್ನು ನಿಗದಿಪಡಿಸಲಾಗುತ್ತದೆ. ಎಂಪ್ಯಾನೆಲ್ ಗೊಂಡ ಸಂಸ್ಥೆಗಳು consignment ಆಧಾರದ ಮೇಲೆ ಬಿತ್ತನೆ ಬೀಜಗಳನ್ನು ಇಲಾಖೆಯ ಮುಖಾಂತರ ರೈತರಿಗೆ ವಿತರಿಸುತ್ತವೆ. ರೈತರು ರೈತರ ವಂತಿಕೆಯನ್ನು ಪಾವತಿಸಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಖರೀದಿಸುತ್ತಾರೆ. ರಿಯಾಯಿತಿ ಮೊತ್ತವನ್ನು ಇಲಾಖೆಯಿಂದ ಸಂಸ್ಥೆಗಳಿಗೆ ಪಾವತಿಸಲಾಗುವುದು.<br>ಬಿತ್ತನೆ ಬೀಜಗಳ ದರಗಳನ್ನು ಕಡಿತಗೊಳಿಸಿದಲ್ಲಿ ಬೀಜ ಸರಬರಾಜುದಾರರು ಇಲಾಖೆಗೆ ಬಿತ್ತನೆ ಬೀಜಗಳನ್ನು ಪೂರೈಸುವುದಿಲ್ಲ. ಏಕೆಂದರೆ ಈಗಾಗಲೇ ಬೀಜ ಸರಬರಾಜುದಾರರು ಬೀಜೋತ್ಪಾದನೆ ಮಾಡುವ ರೈತರಿಂದ ಹೆಚ್ಚಿನ ಖರೀದಿ ದರ ನೀಡಿ ಬೀಜಗಳನ್ನು ಖರೀದಿಸಿರುತ್ತಾರೆ. ಬೀಜೋತ್ಪಾದನೆಯನ್ನು ರೈತರ ಜಮೀನಿನಲ್ಲಿಯೇ ಕರ್ನಾಟಕ ರಾಜ್ಯ ಬೀಜ ನಿಗಮ ನಿ., ರಾಷ್ಟ್ರೀಯ ಬೀಜ ನಿಗಮ ನಿ., ಕರ್ನಾಟಕ ಎಣ್ಣೆಬೀಜ ಬೆಳೆಗಾರರ ಮಹಾ ಮಂಡಳಿ ಹಾಗೂ ಖಾಸಗಿ ಸಂಸ್ಥೆಗಳು ಕೈಗೊಂಡು ಸರಬರಾಜು ಮಾಡುವುದರಿಂದ ಖರೀದಿ ದರ ಹೆಚ್ಚಳ ಮೊತ್ತವು ಬೀಜೋತ್ಪಾದನೆ ಕೈಗೊಳ್ಳುವ ರೈತರಿಗೆ ವರ್ಗಾವಣೆಯಾಗಿರುತ್ತದೆ. |

ಸಂಖ್ಯೆ: AGRI/145/ACT/2024

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು